ಓ ಎಸ್ ನಂಃ**256/2021**
ಪಿಡಬ್ಲ್ಯೂ **:01**

**<u>ದಿನಾಂಕಃ 15.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟಿ ಸವಾಲುಃ ಶ್ರೀ ಆರ್ ಎಸ್ ಎಂ., ಪ್ರತಿವಾದಿ ಪರ ವಕೀಲರಿಂದ</u>**

ನನ್ನ ಮೂಲ ವಾಸ ಕೂಡ್ಲಿಗೆ ತಾಲ್ಲೂಕಿನ ಮಾಕನಡಕು ಗ್ರಾಮ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡನ ಹೆಸರು ಮಲ್ಲಿಕಾರ್ಜುನಪ್ಪ ಆಗಿದ್ದು, ಸದರಿ ಮಲ್ಲಿಕಾರ್ಜುನಪ್ಪ ರವರ ತಂದೆಯ ಹೆಸರು ನಾಗಪ್ಪ ಎಂದರೆ ಸರಿ. ಸದರಿ ನಾಗಪ್ಪನ ತಂದೆಯ ಹೆಸರು ತುಮ್ಮಿನಕಟ್ಟೆ ಗುರುಸಿದ್ದಪ್ಪ ಎಂದರೆ ಸರಿ. 1 ನೇ ಪ್ರತಿವಾದಿಗೆ 2 ಮತ್ತು 3 ನೇ ಪ್ರತಿವಾದಿಯರು ಇಬ್ಬರು ಮಕ್ಕಳಿರುತ್ತಾರೆ ಎಂದರೆ ಸರಿ. ಅಬ್ಬೇನಹಳ್ಳಿ ಸರ್ವೆ ನಂಬರ್ 86 ರ 31 ಎಂಕರೆ 21 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯ ಮಾವ ಮುದ್ದಯ್ಯ ತಂದೆ ತಿಪ್ಪಣ್ಣ ರವರಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು 17.04.1938 ರಲ್ಲಿ ರೂ. 85/- ಶುದ್ಧ ಕ್ರಯದ ಪ್ರತಿಫಲಕ್ಕೆ ಖರೀದಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಾವ ಕುರಿ ವ್ಯಾಪಾರವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು ಹಾಗೂ 1 ನೇ ಪ್ರತಿವಾದಿಯ ಗಂಡ ಹಾಗೂ ಮಾವ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಒಟ್ಟು ಕುಟುಂಬದಲ್ಲಿ ವಾಸವಾಗಿಲ್ಲ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೆ ತೊಂದರೆ ಇರುವುದಿಲ್ಲ. 1 ನೇಪ್ರತಿವಾದಿಯ ಮಾವ ಜಮೀನನ್ನು ಕ್ರಯಕ್ಕೆ ಪಡೆದ ನಂತರ ಆತನ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಸದರಿ ಜಮೀನಿಗೆ ಅವರು ಕಂದಾಯವನ್ನು ಪಾವತಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಮಾವ ತಾನು ಕ್ರಯಕ್ಕೆ ಪಡೆದ ಜಮೀನಿನ ಪಶ್ಚಿಮದಿಕ್ಕಿನ 7 ಎಕರೆ 30 ಗುಂಟೆ ಜಮೀನನ್ನು ಮಲ್ಲಪ್ಪಗಳ ಹನುಮಯ್ಯ ರವರಿಗೆ ದಿನಾಂಕ 06.08.1974 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ. ಅಬ್ಬೇನಹಳ್ಳಿ ಗ್ರಾಮದ ಸರ್ವೆ ನಂಬರ್ 86 ರ ಜಮೀನಿಗೆ ಸಂಬಂಧಿಸಿದಂತೆ ಖಾತೆಯು ಯಾರ

ಹೆಸರಿನಲಿರುತ್ತದೆ ಎಂದು ದಾಖಲೆಗಳನ್ನು ಪರಿಶೀಲಿರುತ್ತೇನೆ. ಸದರಿ ಸರ್ವೆ ನಂಬರಿನ ಜಮೀನು ನಾಗಪ್ಪ, ಸಣ್ಣತಿಪ್ಪಣ್ಣ, ಮೂಗಪ್ಪ ಮತ್ತು ಪೋರಣ್ಣ ಅಂದರೆ ನನ್ನ ಹೆಸರಿನಲ್ಲಿ ಖಾತೆ ಇರುತ್ತದೆ. ಸದರಿ ಮಲ್ಲಪ್ಪಗಳ ಹನುಮಯ್ಯ ತಾನು ಕ್ರಯಕ್ಕೆ ಪಡೆದ ಜಮೀನನ್ನು ಚನ್ನಬಸಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾಗಪ್ಪ ನೇರವಾಗಿ ಚನ್ನಬಸಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾಗಪ್ಪ ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಚನ್ನಬಸಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.